FAX: 91-080-3330277
E-mail comptrolleruasb@gmail.com

GKVK: 23330153 – 225
23332285

# ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

**ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಬೆಂಗಳೂರು –560065**

ಸಂ. ಹನಿಅ/ವಿಭಾಗ-2/ವೇತನ ಪರಿಷ್ಕರಣೆ/2024–25 ದಿನಾಂಕ: 28..08.2024

## ಸುತ್ತೋಲೆ : 10

ವಿಷಯ: 7ನೇ ವೇತನ ಆಯೋಗದ ಶಿಫಾರಸ್ಸುಗಳಂತೆ ವಿಶ್ವವಿದ್ಯಾನಿಲಯದ ಬೋಧಕೇತರ ಸಿಬ್ಬಂದಿಗೆ ವೇತನ ಮತ್ತು ಭತ್ಯೆಗಳನ್ನು ಯಥಾವತ್ತಾಗಿ ಅಳವಡಿಸಿಕೊಳ್ಳುವ ಬಗ್ಗೆ

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ ಆಇ 21 ಎಸ್‌ಆರ್‌ಪಿ 2024 ದಿನಾಂಕ 22.07.2024
2. ಸರ್ಕಾರದ ಆದೇಶ ಸಂಖ್ಯೆ ಆಇ 21 ಎಸ್‌ಆರ್‌ಪಿ 2024 ದಿನಾಂಕ 17.08.2024
3. ಸರ್ಕಾರದ ಆದೇಶ ಸಂಖ್ಯೆ ಆಇ 21 ಎಸ್‌ಆರ್‌ಪಿ 2024 ದಿನಾಂಕ 23.08.2024
4. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ 28.08.2024

******

ಕರ್ನಾಟಕ ಸರ್ಕಾರವು ರಾಜ್ಯ ಸರ್ಕಾರಿ ನೌಕರರು ಮತ್ತು ವಿಶ್ವವಿದ್ಯಾಲಯಗಳ ಭೋಧಕೇತರ ಸಿಬ್ಬಂದಿಯ ವೇತನ ಶ್ರೇಣಿ ಮತ್ತು ಸಂಬಂಧಿಸಿದ ಭತ್ಯೆಗಳನ್ನು ಪರಿಷ್ಕರಿಸಲು ಉಲ್ಲೇಖಿತ ಆದೇಶ ಸಂಖ್ಯೆ 1, 2 ಮತ್ತು 3 ರಂತೆ ಅನಷ್ಠಾನಗೊಳಿಸುವ ಕುರಿತು ಆದೇಶ ಹೊರಡಿಸಿರುತ್ತದೆ. ಅದ್ದರಿಂದ, ವಿಶ್ವವಿದ್ಯಾನಿಲಯದ ಎಲ್ಲಾ ಬಟಾವಾಡೆ ಅಧಿಕಾರಿಗಳಿಗೆ ಈ ಮೂಲಕ ಸೂಚಿಸುವುದೇನೆಂದರೆ, ಬೋಧಕೇತರ ನೌಕರರ ವೇತನವನ್ನು ನಿಗದಿಪಡಿಸಲು ಉಲ್ಲೇಖಿತ ಸರ್ಕಾರಿ ಆದೇಶಗಳನ್ನು / ವೇತನ ನಿಗದಿಯ ಕೈಪಿಡಿಯನ್ನು ಪರಿಶೀಲಿಸುವುದು ಹಾಗೂ ಸದರಿ ನೌಕರರ ಸೇವಾ ಪುಸ್ತಕದಲ್ಲಿ ನಿಗದಿಪಡಿಸಿರುವ ಮೂಲವೇತನದಂತೆ ಪರಿಷ್ಕೃತ ವೇತನವನ್ನು ನಿಗದಿಪಡಿಸುವುದು. ಸರ್ಕಾರದ ಆದೇಶಗಳು, fitmet table ಹಾಗೂ ಇತರೆ ಮಾಹಿತಿಗಾಗಿ ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಅಧಿಕೃತ ಅಂತರ್ಜಾಲತಾಣ https://finance.karnataka.gov.in ವೀಕ್ಷಿಸುವುದು ಮತ್ತು ಅವಶ್ಯಕ ಆದೇಶಗಳ ಪ್ರತಿಗಳನ್ನು ಪ್ರಿಂಟ್ ತೆಗೆದುಕೊಳ್ಳುವುದು.

ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ **ಸದರಿ ಅನುಬಂಧ-II ನಮೂನೆಯನ್ನು ಪರಿಗಣಿಸಲು** ಹಾಗೂ ಬೋಧಕೇತರ ನೌಕರರ ವೇತನವನ್ನು ನಿಗದಿಪಡಿಸಿ, ಸಂಬಂಧಪಟ್ಟ ನೌಕರರ ಸೇವಾ ಪುಸ್ತಕದಲ್ಲಿ ವಿವರಗಳನ್ನು ನಮೂದಿಸಿ ಬಟಾವಾಡೆ ಅಧಿಕಾರಿಗಳು / ನಿಯಂತ್ರಣಾಧಿಕಾರಿಗಳು ಸಹಿ ಮಾಡುವುದು ಹಾಗೂ ಸದರಿ ನಮೂನೆಯ ಒಂದು ಪ್ರತಿಯನ್ನು ದಿನಾಂಕ 30.08.2024 ರೊಳಗೆ ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿಗೆ ಸಲ್ಲಿಸುವುದು.

**ಹಣಕಾಸು ನಿಯಂತ್ರಣಾಧಿಕಾರಿಗಳು**

ಪ್ರತಿ:

1. ವಿಶ್ವವಿದ್ಯಾನಿಲಯದ ಎಲ್ಲಾ ಅಧಿಕಾರಿಗಳಿಗೆ
2. ಎಲ್ಲಾ ಯೋಜನೆಗಳ ಮುಖ್ಯಸ್ಥರಿಗೆ
3. ಎಲ್ಲಾ ಕೇಂದ್ರಗಳ ಸಹ ಸಂಶೋಧನಾ ನಿರ್ದೇಶಕರಿಗೆ
4. ಎಲ್ಲಾ ಉಪ ಹಣಕಾಸು ನಿಯಂತ್ರಣಾಧಿಕಾರಿಗಳು, ಸಹಾಯಕ ಹಣಕಾಸು ನಿಯಂತ್ರಣಾಧಿಕಾರಿಗಳಿಗೆ
5. ವಿಶ್ವವಿದ್ಯಾನಿಲಯದ ಎಲ್ಲಾ ಬಟವಾಡೆ ಅಧಿಕಾರಿಗಳಿಗೆ.